ವಿದ್ಯಾವರ್ಧಕ ಸಂಘ (ರಿ), ಮೈಸೂರು

# ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು

ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು - 570001



# ಕಲಾ ಸಂಭ್ರಮ: 2026-27

-ಕಲೆಯನ್ನು ಪ್ರೀತಿಸಿ, ಪ್ರತಿಭೆಯನ್ನು ಬೆಳೆಸಿ

ರಾಜ್ಯ ಮಟ್ಟದ ಅಂತರ ಕಾಲೇಜುಗಳ ಚರ್ಚಾಸ್ಪರ್ಧೆ ಹಾಗೂ ಜನಪದ ಗೀತೆ ಗಾಯನ ಸ್ಪರ್ಧೆ

ದಿನಾಂಕ: 29.08.2026ನೇ ಶನಿವಾರ

ಗೆ,







ವಿದ್ಯಾವರ್ಧಕ ಸಂಘ (ರಿ), ಮೈಸೂರು

# ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು

ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು – 570001



# ಕಲಾ ಸಂಭ್ರಮ: 2026–27

–ಕಲೆಯನ್ನು ಪ್ರೀತಿಸಿ, ಪ್ರತಿಭೆಯನ್ನು ಬೆಳೆಸಿ

**ರಾಜ್ಯ ಮಟ್ಟದ ಅಂತರ ಕಾಲೇಜುಗಳ ಚರ್ಚಾಸ್ಪರ್ಧೆ ಹಾಗೂ ಜನಪದ ಗೀತೆ ಗಾಯನ ಸ್ಪರ್ಧೆ**

ದಿನಾಂಕ: 29.08.2026ನೇ ಶನಿವಾರ



## ವಿದ್ಯಾವರ್ಧಕ ಸಂಘ (ರಿ)

ಸಾಂಸ್ಕೃತಿಕ ನಗರವಾದ ಮೈಸೂರಿನ ಪ್ರತಿಷ್ಠಿತ ವಿದ್ಯಾಸಂಸ್ಥೆ, ವಿದ್ಯಾವರ್ಧಕ ಸಂಘವು (ರಿ) ಬಡವರ ಮಕ್ಕಳು ವಿದ್ಯೆಯಿಂದ ವಂಚಿತರಾಗಬಾರದೆನ್ನುವ ಉದ್ದೇಶದಿಂದ ಅತ್ಯಂತ ಕಡಿಮೆ ವೆಚ್ಚದಲ್ಲಿ ವಿದ್ಯೆ ನೀಡಬೇಕೆಂಬ ಮಹದಾಸೆಯಿಂದ **ದಿ. ಕೆ. ಪುಟ್ಟಸ್ವಾಮಿ** ಮತ್ತು **ದಿ. ಸಾಹುಕಾರ್ ಚೆನ್ನಯ್ಯ** ರವರುಗಳು 1949ರಲ್ಲಿ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದರು. ಇಂದು ಈ ಸಂಘ ಪೂರ್ವ ಪ್ರಾಥಮಿಕ, ಪ್ರಾಥಮಿಕ ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಪದವಿ, ಇಂಜಿನಿಯರಿಂಗ್, ಡಿಪ್ಲೊಮೊ, ಐ.ಟಿ.ಐ, ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ ಸೇರಿ ಒಟ್ಟು 10 ಶಾಲಾ ಕಾಲೇಜುಗಳನ್ನು ತುಂಬಾ ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ.

## ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು

ವಿದ್ಯಾವರ್ಧಕ ಸಂಘದ ಅಡಿಯಲ್ಲಿ 1978ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆಯೊಂದಿಗೆ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಆರಂಭಗೊಂಡು ಇಂದು ಬಿ.ಬಿ.ಎ, ಬಿ.ಕಾಂ, ಬಿ.ಎ, ಬಿ.ಸಿ.ಎ, ಎಂ.ಕಾಂ ಹಾಗೂ ಎಂ.ಸಿ.ಎ ವಿಭಾಗಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದ್ದು, ನಗರ ಹಾಗೂ ಗ್ರಾಮೀಣ ಭಾಗದ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇದೇ ಅಲ್ಲದೆ ವಿದ್ಯಾವರ್ಧಕ ಸಂಶೋಧನಾ ಪ್ರತಿಷ್ಠಾನದ ಮೂಲಕ ವಾಣಿಜ್ಯಶಾಸ್ತ್ರ ಹಾಗೂ ವ್ಯವಹಾರನಿರ್ವಹಣಶಾಸ್ತ್ರ ವಿಷಯಗಳಲ್ಲಿ ಆಸಕ್ತ ಸಂಶೋಧಕರಿಗೆ ಪಿ.ಹೆಚ್.ಡಿ ಪದವಿಗಳಿಸಲು ಅವಕಾಶ ನೀಡಲಾಗುತ್ತಿದೆ. ಕಾಲೇಜಿನಲ್ಲಿ ಅತ್ಯಂತ ಅನುಭವಿ ಪ್ರಾಂಶುಪಾಲರು, ಬೋಧಕರು ಹಾಗೂ ಬೋಧಕೇತರರು ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರದ ಮಾನ್ಯತೆಯನ್ನಷ್ಟೇ ಅಲ್ಲದೆ ಕೇಂದ್ರ ಸರ್ಕಾರದ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದಿಂದ 12 (ಬಿ) ಹಾಗೂ 2 (ಎಫ್) ದೃಢೀಕರಣ ಪತ್ರ ಪಡೆದಿದ್ದು, 2004, 2011, 2018ನೇ ಸಾಲಿನಲ್ಲಿ ನ್ಯಾಕ್ ಮಾನ್ಯತೆ ಪಡೆದಿದೆ. 2025ರ ಸಾಲಿನಲ್ಲಿ ನ್ಯಾಕ್ ಸಂಸ್ಥೆಯಿಂದ ಬಿ++ ಮಾನ್ಯತೆಯನ್ನು ಪಡೆದು ಯಶಸ್ವಿಯಾಗಿ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಕಾಲೇಜು ತನ್ನನ್ನು ತಾನು ತೊಡಗಿಸಿಕೊಂಡಿದೆ.

## ಕಲಾ ಸಂಭ್ರಮ

ವಿದ್ಯಾರ್ಥಿಗಳಲ್ಲಿ ಸುಪ್ತವಾಗಿ ಹುದುಗಿರಬಹುದಾದ ಗೀತೆ, ನಾಟಕ, ಮಾತುಗಾರಿಕೆಯಂತಹ ಹಲವು ಪ್ರತಿಭೆಗಳನ್ನು ಹೊರತಂದು ಅವರಲ್ಲಿರಬಹುದಾದ ವೇದಿಕೆಯ ಭಯವನ್ನು ಹೋಗಲಾಡಿಸುವ ಸಲುವಾಗಿ ಕಲಾ ಸಂಭ್ರಮದಂತಹ ಮುಕ್ತ ವೇದಿಕೆಯೊಂದನ್ನು ಕಾಲೇಜು ಕಲ್ಪಿಸಿಕೊಡುತ್ತಿದೆ. ಈ ಮೂಲಕ ವಿದ್ಯಾರ್ಥಿಗಳು ಇದನ್ನು ಸದುಪಯೋಗ ಪಡಿಸಿಕೊಂಡು ತಮ್ಮೊಳಗಿರುವ ಸುಪ್ತವಾದ ಪ್ರತಿಭೆಯನ್ನು ಪ್ರದರ್ಶಿಸಿ ಭವಿಷ್ಯದಲ್ಲಿ ಉತ್ತಮವಾದ ವಾಕ್ಪಟು ಹಾಗೂ ಹಾಡುಗಾರರಾಗಲೆಂಬ ಉದ್ದೇಶದಿಂದ 'ಕಲಾ ಸಂಭ್ರಮ'ವೆಂಬ ಈ ಕಾರ್ಯಕ್ರಮವನ್ನು ಪ್ರತಿ ವರ್ಷವು ಆಯೋಜಿಸಿಕೊಂಡು ಬರುತ್ತಿದ್ದೇವೆ. ಅದರಂತೆ ಈ ವರ್ಷ ಚರ್ಚಾ ಸ್ಪರ್ಧೆ ಹಾಗೂ ಜನಪದ ಗೀತೆಗಳ ಗಾಯನ ಸ್ಪರ್ಧೆಯನ್ನು ಏರ್ಪಡಿಸಿದ್ದೇವೆ.

## ಸ್ಪರ್ಧೆಗಳು

ದಿನಾಂಕ: 29.08.2026ರ ಶನಿವಾರ

ಸಮಯ: ಬೆಳಗ್ಗೆ – 11.00 ಗಂಟೆಗೆ

### ಕನ್ನಡ ಚರ್ಚಾ ಸ್ಪರ್ಧೆ :

ವಿಷಯ : "ಉಚಿತ ಗ್ಯಾರಂಟಿ ಯೋಜನೆಗಳು
ರಾಜ್ಯದ ದೀರ್ಘಕಾಲದ ಆರ್ಥಿಕ ಪ್ರಗತಿಗೆ ಮಾರಕ"

ವಿಷಯ ಸೂಚಕರು: **ಶ್ರೀ. ಶಶಿಧರ್.ಎಸ್**

ವಿ.ಸೂ: ಪ್ರತಿ ಕಾಲೇಜಿನಿಂದ ಇಬ್ಬರು ಸ್ಪರ್ಧಿಗಳು ಭಾಗವಹಿಸುವುದು
(ಒಬ್ಬರು ಪರ ಮತ್ತು ಮತ್ತೊಬ್ಬರು ವಿರೋಧ)

### ಜನಪದ ಗೀತೆ ಗಾಯನ ಸ್ಪರ್ಧೆ :

(ಪ್ರತಿ ಕಾಲೇಜಿನಿಂದ ಇಬ್ಬರು ಸ್ಪರ್ಧಿಗಳು ಭಾಗವಹಿಸುವುದು)

**ಈ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪತ್ರ ಹಾಗೂ
ನಗದು ಬಹುಮಾನ**

ಪ್ರಥಮ ಸ್ಥಾನ – **ರೂ. 6,000/-**

ದ್ವಿತೀಯ ಸ್ಥಾನ – **ರೂ. 4,000/-**

ತೃತೀಯ ಸ್ಥಾನ – **ರೂ. 2,000/-**



# ಕಲಾ ಉತ್ಸವ ಸಮಿತಿ

## ಮಹಾ ಪೋಷಕರು

**ಶ್ರೀ. ಗುಂಡಪ್ಪಗೌಡ**
ಗೌ॥ ಅಧ್ಯಕ್ಷರು
ವಿದ್ಯಾವರ್ಧಕ ಸಂಘ (ರಿ).
ಮೈಸೂರು

**ಶ್ರೀ. ಪಿ. ವಿಶ್ವನಾಥ್**
ಗೌ॥ ಕಾರ್ಯದರ್ಶಿಗಳು
ವಿದ್ಯಾವರ್ಧಕ ಸಂಘ (ರಿ).
ಮೈಸೂರು

**ಶ್ರೀ. ಶ್ರೀಶೈಲರಾಮಣ್ಣವರ್**
ಗೌ॥ ಕೋಶಾಧ್ಯಕ್ಷರು
ವಿದ್ಯಾವರ್ಧಕ ಸಂಘ (ರಿ).
ಮೈಸೂರು

## ಪೋಷಕರು

**ಡಾ. ತೇಜಸ್ ಬಾಬ ಕೆ ಸಿ**
ಅಧ್ಯಕ್ಷರು
ಕಾಲೇಜು ನಿರ್ವಹಣಾ ಮಂಡಳಿ

**ಶ್ರೀ ಸೋಮಶೇಖರ್. ಹೆಚ್**
ಸದಸ್ಯರು
ಕಾಲೇಜು ನಿರ್ವಹಣಾ ಮಂಡಳಿ

**ಡಾ. ಎಸ್. ಮರೀಗೌಡ**
ಪ್ರಾಂಶುಪಾಲರು

## ಸಮಿತಿ ಸದಸ್ಯರು

**ಡಾ. ಶ್ರೀನಿವಾಸ ಟಿ**
ಸಂಯೋಜನಾ ಕಾರ್ಯದರ್ಶಿ
ಮೊ: 9741515995

**ಕು. ಹೇಮ ಕೆ ಎಂ**
ಸಂಚಾಲಕರು
ಮೊ: 7899970859

**ಶ್ರೀಮತಿ ಸಹನ ಡಿ**
ಸಹ-ಸಂಚಾಲಕರು
ಮೊ: 9901772618

**ಶ್ರೀ ಶಶಿಧರ್ ಎಸ್**
ಅಧ್ಯಾಪಕ ಸಲಹೆಗಾರರು
ಮೊ: 9738460161

## ವಿದ್ಯಾರ್ಥಿ ಸಂಚಾಲಕರು

**ಅಕ್ಷಯ್ ಕುಮಾರ್ ಎಸ್**
ಮೊ: 8123557582

**ಅಭಿನಯ ಆರ್**
ಮೊ: 8197183254

**ಚಿನ್ಮಯ್ ಎನ್**
ಮೊ: 9945724048

**ಐಶ್ವರ್ಯ ಎಲ್**
ಮೊ: 9591353296

**ಚೇತನ್ ಎಂ**

**ದುರ್ಗ ಪ್ರಸಾದ್ ಕೆ**

**ಮಹಾಲಕ್ಷ್ಮೀ ಎಲ್**

---

ಸೂಚನೆಗಳು:

1. ಚರ್ಚಾ ಸ್ಪರ್ಧೆಯಲ್ಲಿ ಇಬ್ಬರು ಸ್ಪರ್ಧಿಗಳನ್ನೊಳಗೊಂಡ ಪ್ರತಿ ತಂಡಕ್ಕೆ ರೂ.100/- ನೋಂದಣಿ ಶುಲ್ಕವಿರುತ್ತದೆ.
2. ಜನಪದ ಗೀತೆ ಗಾಯನ ಸ್ಪರ್ಧೆಗೆ ಪ್ರತಿ ಸ್ಪರ್ಧಿಗೆ ರೂ.100/- ನೋಂದಣಿ ಶುಲ್ಕವಿರುತ್ತದೆ.
3. ವಿದ್ಯಾರ್ಥಿಗಳು ತಮ್ಮ ಕಾಲೇಜಿನಿಂದ ಅನುಮತಿ ಪತ್ರ ಮತ್ತು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು.
4. ದಿನಾಂಕ: 29.08.2026ರ ಬೆಳಗ್ಗೆ 9.00ಗಂಟೆಯೊಳಗೆ ನೋಂದಣಿ ಮಾಡಿಕೊಳ್ಳತಕ್ಕದ್ದು.

**ವಿದ್ಯಾವರ್ಧಕ ಸಂಘ (ರಿ), ಮೈಸೂರು**